2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ., ದಂಡಾಧಿಕಾರಿಗಳವರ ನ್ಯಾಯಾಲಯ, ಕೃಷ್ಣರಾಜಪೇಟೆ

**ಸಿ.ಸಿ. ನಂ. 281/2019**

| | | |
|---|---|---|
| ಸಾಕ್ಷಿದಾರರ ಹೆಸರು | ನಿಂಗೇಗೌಡ | ಪ್ರಾಸ - 2 ಚಾ.ಸಾ - 1 |
| ತಂದೆಯ/ಗಂಡನ ಹೆಸರು | ಲೇಟ್ ಬಸವೇಗೌಡ | |
| ವಯಸ್ಸು | 66 ವರ್ಷ | |
| ವೃತ್ತಿ | ವ್ಯವಸಾಯ | |
| ವಾಸ ಸ್ಥಳ | ಚಿಕ್ಕಹೊಸಹಳ್ಳಿ ಗ್ರಾಮ | |

ಸಾಕ್ಷಿಗೆ ದಿನಾಂಕಃ **20.05.2024** ರಂದು ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎ. ಪಿ. ಪಿ. ಯವರಿಂದ,

ಸುಮಾರು ವರ್ಷದ ಹಿಂದೆ ಮದ್ಯಾಹ್ನ 12.00 ಗಂಟೆ ಸಮಯದಲ್ಲಿ 1 ರಿಂದ 3 ನೇ ಆರೋಪಿತರು ಹಾಗೂ 11, 12 ನೇ ಆರೋಪಿತರು ಏಕಾಏಕಿ ಬಂದು ಜಮೀನಿನ ವಿಚಾರವಾಗಿ ಜಗಳ ಮಾಡಿ ಹಲ್ಲೆ ಮಾಡಿರುತ್ತಾರೆ.

(ಈ ಸಂದರ್ಭದಲ್ಲಿ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಗಿ ಪ್ರಾಜ್ಞ ಸ.ಸ.ಅ. ಪಾಟೀ ಸವಾಲು ಮಾಡಲು ಕೇಳಲಾಗಿ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಎಪಿಪಿ ವಕೀಲರಿಂದ,

ದಿನಾಂಕ 30.12.2018 ರಂದು ನಮ್ಮ ಗ್ರಾಮದಲ್ಲಿ ನನಗೆ ಹೋಗಲು ಮನೆಯ ಬಳಿ ಹೋದಾಗ ಆರೋಪಿತರು ಅಕ್ರಮ ಗುಂಪುಕಟ್ಟಿಕೊಂಡು ಬಂದು, ಕೈಯಲ್ಲಿ ದೊಣ್ಣೆಗಳನ್ನು ಕುಡುಗೋಲಿನಲ್ಲಿ ಹಾಗೂ ಮಚ್ಚನ್ನು ಹಿಡಿದು ಮನೆ ಹಾಗೂ ಜಮೀನಿನ ವಿಚಾರವಾಗಿ ದ್ವೇಷದಿಂದ ನನ್ನನ್ನು ಮನೆಯ ಒಳಗಡೆ ಹೋಗದಂತೆ ತಡೆದು ಅವಾಚ್ಯ ಶಬ್ದದಿಂದ ಬೈದು ನಿಂದಿಸಿರುತ್ತಾರೆ ಎಂದರೆ ಸರಿ. ನಾನು, ಇದು ನನ್ನ ಮನೆ ನ್ಯಾಯಾಲಯದಿಂದ ತಡೆಯಾಜ್ಞೇ ಆದೇಶ ಇದೆ ಎಂದು

ಆರೋಪಿತರಿಗೆ ಹೇಳಿದಕ್ಕೆ 1 ನೇ ಆರೋಪಿ ಇದು ನನ್ನ ಮನೆ ಎಂದು ಅವಾಚ್ಯ ಶಶಬ್ದದಿಂದ ನಿಂದಿಸಿ ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ನನ್ನ ಬಲತೊಡೆಗೆ ಹೋಡೆದು ನೋವುಂಟು ಮಾಡಿದ್ದು, 2 ನೇ ಆರೋಪಿ ಕುಡುಗೋಲಿನಿಂದ ನನ್ನ ಎಡಗೈಗೆಹೊಡೆದು ನೋವುಂಟು ಮಾಡಿರುತ್ತಾರೆ ಎರಂದೆ ಸರಿ. 12 ನೇ ಆರೋಪಿ ದೊಣ್ಣೆಯಿಂದ ನನ್ನ ಎದೆಗೆ ಗುದ್ದಿ ನೋವುಂಟು ಮಾಡಿ, 2 ನೇ ಆರೋಪಿ ಮಚ್ಚಿನಿಂದ ಹೊಡೆದು ಸಾಯಿಸಿ ಎಂದು ಕುಮ್ಮಕ್ಕು ಕೊಟ್ಟಾಗ, 11 ನೇ ಆರೋಪಿಯು ತನ್ನ ಕೈಯಲ್ಲಿದ್ದ ಮಚ್ಚಿನಿಂದ ನನ್ನ ಮೇಲೆ ಹಲ್ಲೆ ಮಾಡಲು ಯತ್ನಿಸಿರುತ್ತಾರೆ ಎಂದರೆ ಸರಿ.

ಸದರಿ ಘಟನೆಯನ್ನು ಚಾಸಾ-2, 5 ಹಾಗೂ 6 ರವರು ನೋಡಿದ ಕೇಳಿದ ಕಾರಣ ಚಾಸಾ-2 ರವರನ್ನು 3, 11 ಹಾಗೂ 12 ನೇ ಆರೋಪಿತರು ಕೆಳಕ್ಕೆ ಕೆಡವಿ ತಮ್ಮ ಕಾಲುಗಳಿಂದ ಚಾಸಾ-2 ರವರ ಹೊಟ್ಟೆಯ ಮೇಲೆ ತುಳಿದು ನೋವುಂಟು ಮಾಡಿ ಅವಾಚ್ಯ ಶಬ್ದದಿಂದ ಬೈದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ನಂತರ ಅಲ್ಲೆ ಇದ್ದ ಚಾಸಾ-3 ಹಾಗೂ 4 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ ಎಂದರೆ ಸರಿ. ಸದರಿ ವಿಚಾರವಾಗಿ ಅದೇ ದಿನ ದೂರನ್ನು ಸಲ್ಲಿಸಲಾಗಿರುತ್ತದೆ ಎಂದರೆ ಸರಿ. ಸದರಿ ದೂರನ್ನು ನಿಪಿ 1 ಎಂದು ಸಾಕ್ಷಿಯ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು.

ನಂತರ ಮಾರನೇ ದಿನ ಪೊಲೀಸರು ನಾನು ತೋರಿಸಿದ ಸ್ಥಳದಲ್ಲಿ ಚಾಸಾ-7 ಹಾಗೂ 8 ರ ಸಮಕ್ಷಮ ಬೆಳಗ್ಗೆ 10.30 ಗಂಟೆಯಿಂದ 11.15 ಗಂಟೆವರೆಗೆ ಮಹಜರ್ ಕ್ರಮ ಜರುಗಿಸಿ ಒಂದು ಕಬ್ಬಿಣದ ಮಚ್ಚು, ಕುಡುಗೋಲು ಹಾಗೂ ಎರಡು ಮರದ ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಸ್ತುಗಳನ್ನು ಸಾಕ್ಷಿಯು ನೋಡುತ್ತಿದ್ದು, ಅವುಗಳನ್ನು ಮು.ಮಾ1 ರಿಂದ 4 ಎಂದು ಗುರುತಿಸಲಾಯಿತು. ಸದರಿ ದಾಖಲಾತಿಯನ್ನು ನಿಪಿ2 ಎಂದು, ಸಾಕ್ಷಿಯ ಸಹಿಯನ್ನು ನಿಪಿ2 ಎ ಎಂದು ಗುರುತಿಸಲಾಯಿತು. ಸದರಿ ವಿಚಾರವಾಗಿ ದಿನಾಂಕ

01.01.2019 ರಂದು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ವಾಯ್.ಜಿ. ವಕೀಲರಿಂದ ,</u>

ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಂಜಸವಲ್ಲದ ಕಾರಣ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಸಾ ಓ ಹೇ ಸ ಒ .**

2 ನೇ ಅಪರ ಸಿವಿಲ್ **ನ್ಯಾಯಾಧೀಶರು ಮತ್ತು ಪ್ರದನ್ಯಾ.**
**ದಂಡಾಧಿಕಾರಿಗಳು, ಕೃಷ್ಣರಾಜಪೇಟೆ .**